ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 09.03.2026

ಪಾಟೀ ಸವಾಲು ಃ ವಾದಿ ಪರ ಶ್ರಿ ಬಿ.ಸಿ.ಡಿ ವಕೀಲರಿಂದ

1. ವಾದಿಯು ಯಾವ ವಿಚಾರವಾಗಿ ದಾವಾ ದಾಖಲಿಸಿರುತ್ತಾರೆ ಎಂಬ ಸಂಗತಿ ಗೊತ್ತು. ವಾದಿಯು 1ನೇ ಪ್ರತಿವಾದಿಯ ಉಗ್ರಾಣ ನಿಗಮಕ್ಕೆ 50 ಕೆ.ಜಿ ತೂಕದ 40 ರಾಗಿ ಚೀಲಗಳನ್ನು ಹಾಕಿ ಅದರ ಪ್ರತಿಫಲವಾಗಿ 63,480/- ರೂಪಾಯಿಗಳ ವೋಚರ್ ನ್ನು ಪಡೆದುಕೊಂಡಿದ್ದು ಹೆಸರು ತಪ್ಪಾಗಿ 2ನೇ ಪ್ರತಿವಾದಿಯ ಖಾತೆಗೆ ಹಣ ಹೋಗಿರುತ್ತದೆ ಎಂದರೆ ಸುಳ್ಳು. ದಿನಾಂಕ 27.01.2021 ರಂದು ವಾದಿಯು 2ನೇ ಪ್ರತಿವಾದಿಯ ವಿರುದ್ಧ ಹಣ ವಾಪಸ್ ಕೊಡಿಸಿಕೊಡುವಂತೆ ದೂರು ದಾಖಲಿಸಿದ್ದರು ಎಂದರೆ ಸರಿ. ಆ ದೂರಿಗೆ ಅನುಗುಣವಾಗಿ 2ನೇ ಪ್ರತಿವಾದಿಯು ಠಾಣೆಯಲ್ಲಿ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿ. ನಿಡಿ-3 ಗ್ರೈನ್ ವೋಚರ್ ನ್ನು ಇಲಾಖೆಯಿಂದ 2ನೇ ಪ್ರತಿವಾದಿಗೆ ನೀಡಿರುವ ದಾಖಲೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ನಿಡಿ-3 ಗ್ರೈನ್ ವೋಚರ್ ನಲ್ಲಿ 2ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. 40 ಚೀಲ ರಾಗಿಯನ್ನು 1ನೇ ಪ್ರತಿವಾದಿಯ ಉಗ್ರಾಣ ನಿಗಮಕ್ಕೆ ಸರಬರಾಜು ಮಾಡಿರುತ್ತೇವೆ ಎಂದು ತೋರಿಸಲು ನನ್ನ ಬಳಿ ಯಾವುದೇ ಸ್ವೀಕೃತಿ ಇಲ್ಲ ಮತ್ತು ಅವರು ಸ್ವೀಕೃತಿ ನೀಡಿರುವುದಿಲ್ಲ. ನಾವು ಯಾವುದೇ ರೀತಿಯ ರಾಗಿಯನ್ನು ಪೂರೈಕೆ ಮಾಡದೆ ಇರುವ ಕಾರಣ ನಮ್ಮ ಬಳಿ ದಾಖಲೆ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಪ್ಪಾಗಿ 2ನೇ ಪ್ರತಿವಾದಿಯ ಖಾತೆಗೆ ಬಂದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು

2 ನೇ ಪ್ರತಿವಾದಿಯ ವಿರುದ್ಧ ದೂರು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ಮುಂತಾದ ದಾಖಲೆಗಳನ್ನು ಪರಿಶೀಲಿಸಿ ನಮಗೆ ಹಣ ಸೇರಬೇಕು ಎಂದು ಕಂಡುಬಂದ ಕಾರಣ ಪೋಲೀಸರು ದೂರು ಪಾಪಸ್ಸು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಠಾಣೆಯಲ್ಲಿ ನಾವು ಹಣ ಮರುಪಾವತಿ ಮಾಡಲು ಕಾಲಾವಕಾಶ ಕೋರಿದ್ದೆವು ಎಂದರೆ ಸರಿಯಲ್ಲ. ವಾದಿಯು ನನಗೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ. ನಾನು ಯಾವುದೇ ಜವಾಬು ನೀಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಯಾವುದೇ ರಾಗಿಯನ್ನು 1 ನೇ ಪ್ರತಿವಾದಿಗೆ ಪೂರೈಕೆ ಮಾಡಿಲ್ಲ, ಕಣ್ತುತಪ್ಪಿನಿಂದ ತನ್ನ ಖಾತೆಗೆ ಬಂದ ಹಣವನ್ನು ಆಕೆ ದುರುಪಯೋಗಪಡಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ರಾಗಿ ಹಾಜರುಪಡಿಸಿರುವುದಕ್ಕೆ ಸಂಬಂಧಪಟ್ಟಂತೆ ಯವುದೇ ರೀತಿಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ವಾದಿಯ ದಾಖಲೆಗಳು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.